ಅವಳನ್ನು ಒಳಕರೆದ ಭುವನೇಶ್ವರಿ ಆ ಯುವಕನ ಪಕ್ಕದಲ್ಲಿ ಇರುವ ಕುರ್ಚಿಯಲ್ಲಿ ಕುಳಿತುಕೊಳ್ಳಲು ಸೂಚಿಸಿದಾಗ ಉಪಾಯವಿಲ್ಲದೆ ಕುಳಿತಳು. ಪ್ರಿನ್ಸಿಪಾಲ್ ಭುವನೇಶ್ವರಿಯನ್ನೇ ದಿಟ್ಟಿಸಿದಳು.

ಸದಾ ನಗುನಗುತ್ತಿರುವ ಅವರ ಮುಖವಿಂದು ಮ್ಲಾನವಾಗಿತ್ತು. ಎರಡು ದಿನದಿಂದ ಪ್ರಶಾಂತನ ಕೊಲೆಯ ವಿಷಯವಾಗಿ ಸಾಕಷ್ಟು ತಲೆಕೆಡಿಸಿಕೊಂಡಿದ್ದಾರೆಂದು ಅವರ ಕೆಂಪಡರಿದ ಕಣ್ಣುಗಳೇ ಸಾರಿ ಹೇಳಿದವು.

'ಋತು, ನಿನ್ನನ್ನು ಯಾಕೆ ಕರೆಸಿರಬಹುದು ಅಂತ ನಿಂಗೂ ಕುತೂಹಲ ಆಗ್ತಿರಬಹುದು.... ಇವನನ್ನು ನಿಂಗೆ ಪರಿಚಯ ಮಾಡಿಸೋಣ ಅಂತ.... ಇವ್ನ ಹೆಸ್ರು ಕುಮಾರ್. ನನ್ನ ಸ್ನೇಹಿತೆಯ ಮಗನೂ ಹೌದು. ಅಷ್ಟೇ ಅಲ್ಲ ಋತು, ಇವನೊಬ್ಬ ಪ್ರೈವೇಟ್ ಡಿಟೆಕ್ಟಿವ್, ಪೊಲೀಸರ ಬಹಳಷ್ಟು ಇನ್ವೆಸ್ಟಿಗೇಷನ್‌ನಲ್ಲಿ ಇವನ ಸಹಾಯವಂತೂ ಇದ್ದೇ ಇರುತ್ತೆ, ಈಗ ಪ್ರಶಾಂತನ ಕೊಲೆಯ ವಿಷಯವಾಗಿ ಇಲ್ಲಿಗೆ ಬಂದಿದ್ದಾನೆ....' ಎಂದ ಭುವನೇಶ್ವರಿ ಕುಮಾರನತ್ತ ತಿರುಗಿ, 'ನಾನು ಹೇಳಿದ್ನಲ್ಲ ಕುಮಾರ್, ನನ್ನ ಮಗಳಿದ್ದ ಹಾಗೆ ಅಂತ, ಇವ್ಳೇ ಋತು, ವೆರಿ ಬ್ರಿಲಿಯಂಟ್ ಗರ್ಲ್, ಮ್ಯಾಥ್ಸ್ ಲೆಕ್ಚರರ್ ಆಗಿದ್ದಾಳೆ.'

ಭುವನೇಶ್ವರಿ ಪರಸ್ಪರರನ್ನು ಪರಿಚಯಿಸಿದಾಗ ಒಬ್ಬರನ್ನೊಬ್ಬರು ನೋಡಲೇಬೇಕಾಯಿತು.

ಕೋಲು ಮುಖದ, ಬೊಗಸೆ ಕಂಗಳ ಚೆಲುವೆ ಋತು ತಿಳಿ ಹಸಿರು ಬಣ್ಣದ ಕಾಟನ್ ಸೀರೆಯಲ್ಲಿ ನಿರಾಭರಣ ಸುಂದರಿಯಾಗಿ ಕಂಡಳು ಆತನಿಗೆ. ಆಕೆಯನ್ನೊಮ್ಮೆ ನೋಡಿ ನಸುನಗೆ ಬೀರಿದ.

ಋತುವೂ ಪಕ್ಕದಲ್ಲಿದ್ದ ಆ ತರುಣನನ್ನೇ ನೋಡಿದಳು. ಹರವಾದ ಮೈಕಟ್ಟಿನ ಆಜಾನುಬಾಹು. ದಟ್ಟ ಗುಂಗುರು ಕೂದಲು. ಕುಡಿಮೀಸೆ. ಸ್ವಲ್ಪ ಕಪ್ಪಾದರೂ ಲಕ್ಷಣವಾಗಿದ್ದ. ಆತನ ತೀಕ್ಷ್ಣ ಕಣ್ಣುಗಳೇ ಆತ ನುರಿತ ಪತ್ತೇದಾರನೆಂದು ಸಾರಿ ಹೇಳುತ್ತಿದ್ದವು. ನೀಲಿ ಜೀನ್ಸ್ ಪ್ಯಾಂಟ್, ಬಿಳಿ ನೀಲಿ ಪಟ್ಟೆಯ ಟೀ ಶರ್ಟ್ ಧರಿಸಿದ್ದ ಆತ.

ಒಂದು ಕ್ಷಣ ಇಬ್ಬರ ನೋಟಗಳೂ ಬೆರೆತವು. ಆ ಕ್ಷಣ ಋತುವಿನ ದೇಹದಾದ್ಯಂತ ನವಿರು ಕಂಪನ ಶುರುವಾಯಿತು. ಆ ಗಂಭೀರ, ಸೊಗಸಿನ ನೋಟವನ್ನು ತಾನೆಲ್ಲೋ ಸಂಧಿಸಿದ್ದೇನೆ ಎನಿಸತೊಡಗಿದಾಗ ಬೆಚ್ಚಿದಳು....! ನಿನ್ನೆ ರಾತ್ರಿಯಷ್ಟೇ ಕಾಡಿದ ಹೇಮಂತ ನೆನಪಾದ....ಹೌದು, ಅನುಮಾನವೇ ಇಲ್ಲ. ಇವನು ಆ ಹೇಮಂತನೇ....ಆದರೆ ಇದು ಹೇಗೆ ಸಾಧ್ಯ? ಇವನು ತಾನು ಕುಮಾರ್ ಎಂದೆನ್ನುತ್ತಿದ್ದಾನೆ. ಹೆಸರುಗಳು ಬದಲಾದರೆ ವ್ಯಕ್ತಿ ಬದಲಾಗಲು ಸಾಧ್ಯವೇ?....ಅದೇ ನೋಟ, ಅದೇ ಆರಾಧನೆಯ ದೃಷ್ಟಿ....ಅವಳು ಗೊಂದಲಕ್ಕೆ ಸಿಲುಕಿದ್ದಳು.

ಭುವನೇಶ್ವರಿಗೂ ಋತುವಿನ ಮನಸ್ಸಿನ ಗೊಂದಲ ಅರ್ಥವಾಯಿತೆಂದು ಕಾಣುತ್ತದೆ.

'ಯಾಕೆ ಋತು....ಕುಮಾರ್ ಪರಿಚಯ ನಿನಗೆ ಮೊದಲೇ ಇತ್ತಾ?..'

ಆಕೆಯ ಮಾತಿಗೆ ಏನೆಂದು ಪ್ರತಿಕ್ರಿಯಿಸಬೇಕೆಂದು ತಿಳಿಯದೇ ಕುಳಿತಲ್ಲೇ ಚಡಪಡಿಸಿದಳು ಋತು.

'ಚಾನ್ಸೇ ಇಲ್ಲ ಆಂಟಿ....ನಾನು ಹುಟ್ಟಿ ಬೆಳೆದದ್ದೆಲ್ಲಾ ಕೋಲ್ಕತ್ತದಲ್ಲೇ, ಈಗ ಬೆಂಗಳೂರಿನ ಪರಿಚಯ ಆಗಿರೋದಷ್ಟೇ..'

ಕುಮಾರನೇ ಮಧ್ಯೆ ಬಾಯಿ ಹಾಕಿದಾಗ ಋತು ನಿಜಕ್ಕೂ ಪೆಚ್ಚಾದಳು. ಈತ ಈಗಷ್ಟೇ ಬೆಂಗಳೂರಿನ ಪರಿಚಯವಾಗಿದೆ ಎನ್ನುತ್ತಿದ್ದಾನೆ, ಹಾಗಿದ್ದ ಮೇಲೆ ಶ್ರೀನಿವಾಸ ಕಲ್ಯಾಣದ ಆ ಹೇಮಂತ ಇವನಾಗಿರಲು ಸಾಧ್ಯವೇ ಇಲ್ಲ. ಆದರೆ ತನ್ನ ಮನಸ್ಸು ಇವನೇ ಹೇಮಂತನೆಂದು ಸಾರಿ ಹೇಳುತ್ತಿದೆ. ಎರಡರಲ್ಲಿ ಯಾವುದೋ ಒಂದು ಸುಳ್ಳಾಗಿರಲೇಬೇಕಲ್ಲ. ಒಂದೋ ಇವನು ಸುಳ್ಳು ಹೇಳುತ್ತಿದ್ದಾನೆ ಅಥವಾ ತಾನೇ ಅವನನ್ನು ಹೇಮಂತನೆಂದು ಭ್ರಮಿಸಿದ್ದೇನೆ...

ಗೊಂದಲಕ್ಕೊಳಗಾದಳು ಋತು. 13 ವರ್ಷಗಳಷ್ಟು ದೀರ್ಘವಾದ ಅವಳ ಪ್ರೇಮ ತಪಸ್ಸು ಇಂದು ಫಲಿಸಿತ್ತು. ಹದಿಹರೆಯದಲ್ಲಿ ಮನಸ್ಸಿನಾಳಕ್ಕೆ ಇಳಿದು ಭದ್ರವಾಗಿ ಬೇರೂರಿದವನು ಇಂದು ಕಣ್ಮುಂದೆ ಸಾಕಾರಗೊಂಡಿದ್ದ. ಮನಸ್ಸು ಇವನೇ ಅವನೆಂದು ಒಪ್ಪಿದರೂ ವಾಸ್ತವ ಬೇರೆಯದೇ ಆಗಿತ್ತು. ಯಾವ ನಿರ್ಧಾರಕ್ಕೂ ಬರಲಾರದೆ ಋತು ತೊಳಲಾಡಿದಳು.

'ಕುಮಾರ್ ಗೆ ಎಲ್ಲರ ಸಹಕಾರವೂ ಬೇಕು ಋತು, ಆದಷ್ಟು ಬೇಗ ಕೊಲೆಗಾರನನ್ನು ಕಂಡು ಹಿಡಿಯುವ ಜವಾಬ್ದಾರಿ ಅವನ ಮೇಲಿದೆ, ಇಲ್ಲದಿದ್ರೆ ಕಾಲೇಜಿನ ಫ್ಯೂಚರ್ ಏನಾಗುತ್ತೋ ಅನ್ನೋ ಭಯ ಎಲ್ಲರನ್ನೂ ಕಾಡ್ತಿದೆಯಲ್ಲ, ಮಧ್ಯಾಹ್ನ ಲಂಚ್ ಅವರ್‌ನಲ್ಲಿ ಕುಮಾರನೊಂದಿಗೆ ಲೆಕ್ಚರರ್ಸ್ ಮೀಟಿಂಗಿಗೆ ಅರೆಂಜ್ ಮಾಡ್ತೀನಿ, ನೀನು ನನ್ನ ಮಗಳಿದ್ದ ಹಾಗೆ ಅಲ್ವಾ, ಅದಕ್ಕೆ ನಿನ್ನನ್ನು ಮೊದಲೇ ಬರೋಕೆ ಹೇಳ್ದೆ....'

ಭುವನೇಶ್ವರಿಯವರು ಆತ್ಮೀಯತೆಯಿಂದ ಭುಜ ತಟ್ಟಿದಾಗ ಅವರ ಮಮತೆಗೆ ಕಣ್ತುಂಬಿ ಬಂತು ಋತುವಿಗೆ. ತಾಯಿಯ ಪ್ರೀತಿಯಿಂದ ವಂಚಿತಳಾದವಳಿಗೆ ವಿಧಿ ಹೀಗೆ ಸಮಾಧಾನವನ್ನು ಕೊಡುತ್ತಿದೆಯೆನಿಸಿತು.

ಭುವನೇಶ್ವರಿಯಿಂದ ಹಾಗೂ ಆ ಯುವಕನಿಂದ ಬೀಳ್ಕೊಂಡು ಮೇಲೆದ್ದಳು. ಅವನ ನೋಟ ಮತ್ತೊಮ್ಮೆ ಕಲೆತಾಗ ಅದೇ ಮಧುರಾನುಭೂತಿ....ಹಾಗಾದರೆ ಇವನ್ಯಾರು?

ಮತ್ತೆ ಸತತವಾಗಿ ಮೂರು ತರಗತಿಗಳಿದ್ದುದರಿಂದ ಆತನ ವಿಷಯವನ್ನು ಸದ್ಯಕ್ಕೆ ಬದಿಗಿರಿಸಿದಳು. ಪರೀಕ್ಷೆಗಳು ಸಮೀಪಿಸುತ್ತಿದ್ದುದರಿಂದ ವಿದ್ಯಾರ್ಥಿಗಳೆಲ್ಲರೂ ಹಾಜರಿದ್ದರು. ಆದರೆ ಯಾರೊಬ್ಬರ ಮುಖದಲ್ಲೂ ಗೆಲುವಿರಲಿಲ್ಲ. ಪ್ರಶಾಂತ ಕೊಲೆಯಾದ ಭೀತಿ ಅಲ್ಲಿ ಪ್ರತಿಫಲಿಸುತ್ತಿತ್ತು.

ಹಾಗೂ ಹೀಗೂ ತರಗತಿಗಳು ಮುಗಿದವು. ಭುವನೇಶ್ವರಿಯವರು ಹೇಳಿದಂತೆ ಲಂಚ್ ಅವರ್‌ನಲ್ಲಿ ಮತ್ತೊಮ್ಮೆ ಕುಮಾರನನ್ನು ಅವಳು ಸಂಧಿಸಿದಳು. ಆತ ಎಲ್ಲರೊಂದಿಗೂ ಆತ್ಮೀಯತೆಯಿಂದ ಮಾತನಾಡಿದ. ಕೊಲೆಗಾರನ ಪತ್ತೆಗೆ ಎಲ್ಲರ ಸಹಕಾರವನ್ನೂ ಕೋರಿದ.

ರಮ್ಯಾಳಿಗಾಗಿ ಸುತ್ತಾ ಕಣ್ಣಾಡಿಸಿದಳು ಋತು. ಒಂದೆಡೆ ಅವಳು ತನ್ನ ಸ್ಟಾಫ್‌ಗಳೊಂದಿಗೆ ಕುಳಿತಿರುವುದು ಕಂಡಾಗ ನೆಮ್ಮದಿಯ ನಿಟ್ಟುಸಿರು ಬಿಟ್ಟಳು. ಪ್ರಪಂಚದ ಎಲ್ಲ ಭಾವ ಬೇಗುದಿಗಳನ್ನು ನೀಗಿ ಹಗುರಾಗಿಸುವುದು ಶುದ್ಧ ಸ್ನೇಹವೊಂದೇ ಎಂಬುದನ್ನು ಅವಳ ಪರಿಚಯವಾದ ಈ ಒಂದು ವರ್ಷದಲ್ಲಿ ಋತು ಕಂಡುಕೊಂಡಿದ್ದಳು. ಆದರೆ ಎಲ್ಲರಿಗೂ ನಿಜವಾದ ಸ್ನೇಹಿತರು ಸಿಗುವುದು ಬಹಳ ಕಷ್ಟ. ಆ ವಿಷಯದಲ್ಲಿ ತಾನು ಅದೃಷ್ಟವಂತೆ ಎಂದುಕೊಂಡಳು.

ಕುಮಾರನೊಂದಿಗಿನ ಭೇಟಿ ಮುಗಿದೊಡನೆ ಅವನನ್ನು ಮತ್ತೊಮ್ಮೆ ಮಾತನಾಡಿಸಲು ಕಾತರಿಸಿ ಮೇಲೆದ್ದಳು. ಆದರೆ ಅಷ್ಟರಲ್ಲಾಗಲೇ ಅವನು ಹೊರಟುಹೋಗಿದ್ದ. ಒಂದು ಕ್ಷಣ ನಿರಾಸೆಯಿಂದ ಅವಳ ಮುಖ ಮುದುಡಿತು. ಅಷ್ಟರಲ್ಲಿ ರಮ್ಯ ಅವಳ ಬಳಿ ಬಂದಿದ್ದಳು.

'ಹಾಯ್ ಋತು, ಬೆಳಿಗ್ಗೆಯಿಂದ ನಿನ್ನ ನೋಡ್ದೇ ಬೇಜಾರಾಗಿತ್ತು ಕಣೇ, ಯಾಕೋ ಒಂಥರಾ ಇದ್ದಿಯಲ್ಲ ಏನ್ಸಮಾಚಾರ....?'

ಅಕ್ಕರೆಯಿಂದ ಗೆಳತಿಯನ್ನು ವಿಚಾರಿಸಿದಳು ರಮ್ಯ.

ಋತುವೇನೂ ಪ್ರತಿಕ್ರಿಯಿಸಲಿಲ್ಲ. ಆದರೆ ಅವಳ ಮುಖದಲ್ಲಿ ಒಂದು ಬಗೆಯ ನಿರಾಸೆಯನ್ನು ಗುರುತಿಸಿದ ರಮ್ಯ ಮತ್ತೆ ಆ ಬಗ್ಗೆ ಪ್ರಶ್ನಿಸಲು ಹೋಗಲಿಲ್ಲ.

ಇಬ್ಬರೂ ಹೊರಬಂದರು. ಮಧ್ಯಾಹ್ನದ ನಂತರ ಇಬ್ಬರಿಗೂ ತರಗತಿಗಳು ಇಲ್ಲದಿದ್ದುದರಿಂದ ಯಾವುದೇ ಗಡಿಬಿಡಿಯಿರಲಿಲ್ಲ.

'ರಮ್ಯ...ಕಾಲೇಜಿನ ಕ್ಯಾಂಟೀನ್ನಿನಲ್ಲಿ ಊಟ ಮಾಡೋಕೆ ತುಂಬಾ ಬೇಜಾರಾಗ್ತಿದೆ ಕಣೇ, ಹೊರಗಡೆ ಎಲ್ಲಾದ್ರೂ ಊಟ ಮಾಡೋಣ್ವಾ?'

ಗೆಳತಿಯ ಮಾತಿಗೆ ರಮ್ಯಾ ಹೂಂಗುಟ್ಟಿದಳು. ಅವಳಿಗೂ ಕಾಲೇಜಿನ ಈ ಉಸಿರುಗಟ್ಟಿಸುವ ಪರಿಸರದಿಂದ ಸದ್ಯಕ್ಕೆ ಬಿಡುಗಡೆ ಬೇಕಿತ್ತು.

ಸ್ವಲ್ಪ ಹೊತ್ತಿಗೆ ಇಬ್ಬರೂ ಕಾಲೇಜಿನ ಹತ್ತಿರ ಮೈನ್ ರೋಡಿನಲ್ಲಿದ್ದ ದರ್ಶಿನಿಯೊಂದರಲ್ಲಿ ಫ್ಯಾಮಿಲಿ ಸರ್ವೀಸ್ ಹಾಲಿನಲ್ಲಿ ಕುಳಿತಿದ್ದರು. ಅದು ಊಟದ ಸಮಯವಾಗಿದ್ದರಿಂದ ಎಲ್ಲ ಟೇಬಲ್ಲುಗಳೂ ಭರ್ತಿಯಾಗಿದ್ದವು.

ಎರಡು ಊಟಕ್ಕೆ ಆರ್ಡರ್ ಮಾಡಿದ ಋತು ಎದುರಿನಲ್ಲಿ ಕುಳಿತಿದ್ದ ಗೆಳತಿಯತ್ತ ದೃಷ್ಟಿ ಚೆಲ್ಲಿದಳು. ಅವಳೂ ಗೊಂದಲದಲ್ಲಿದ್ದಂತಿತ್ತು. ಹೇಮಂತನ ವಿಷಯವನ್ನು ಹೇಳುವುದಕ್ಕೆ ಇದೇ ಸರಿಯಾದ ಸಂದರ್ಭವೆಂದುಕೊಂಡಳು. ಅತ್ತಿತ್ತ ದೃಷ್ಟಿ ಹರಿಸಿದಳು. ಯಾರಾದರೂ ತನ್ನನ್ನು ಗಮನಿಸುತ್ತಿರಬಹುದೇ? ಆದರೆ ಅಂಥ ಯಾವ ವ್ಯಕ್ತಿಯೂ ಅವಳ ಕಣ್ಣಿಗೆ ಬೀಳಲಿಲ್ಲ.

'ಋತು, ನಾನು ನೋಡ್ತಾನೇ ಇದ್ದೀನಿ, ನೀನ್ಯಾಕೋ ಎಂದಿನಂತಿಲ್ಲ, ಅದೇನಾಯ್ತು ಅಂತಾದ್ರೂ ಹೇಳು ಮಹರಾಯ್ತಿ'

ರಮ್ಯಾಳ ಮಾತಿಗೆ ಋತು ಮುಗಳ್ನಕ್ಕರೂ ಅವಳ ಮುಖದ ಗೊಂದಲ ದೂರವಾಗಿರಲಿಲ್ಲ.

'ರಮ್ಯ...ಇವತ್ತಾದ್ರೂ ಹೇಮಂತನ ವಿಷ್ಯವನ್ನು ಹೇಳ್ಲೇಬೇಕಂತ ಅನ್ನಿಸ್ತಿದೆ ಕಣೇ...ಇವತ್ತು ನೀನೇನೂ ಕಾರಣ ಹೇಳೋ ಹಾಗಿಲ್ಲ.'